ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಎಂದು ಹೇಳುತ್ತಾರೆ. ನಿಜವಾಗಲೂ ಕೂಡ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಇದ್ದರೆ ಅದಕ್ಕೆ ನಾವು ತಲೆಬಾಗಿ ವಾಪಸ್ ಬರುತ್ತೇವೆ, ಅದನ್ನು ಉದಾಸಿಯವರು ಹೇಳಬೇಕು. ಇದು ವಿಶ್ವಬ್ಯಾಂಕಿನಿಂದ ಮಂಜೂರಾಗಿರುವ ಯೋಜನೆ, ಅದನ್ನು ಕ್ಯಾಬಿನೆಟ್ ನಲ್ಲಿ ತಂದು ಬದಲಾವಣೆ ಮಾಡಬೇಕು, ಅದನ್ನು ಕೂಡ ಮಾಡಿಲ್ಲ. ನಮ್ಮ ಮೇಲೆ ದ್ವೇಷದ ರಾಜಕಾರಣ ಮಾಡುವುದನ್ನು ಸನ್ಮಾನ್ಯ ಸಚಿವರು ಬಿಡಬೇಕೆಂದು, ಹೇಳಿ ಇದನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.[ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು]

ಪ್ರಕಟಣೆ

ವಿಷಯ: ವಿಧಾನ ಪರಿಷತ್ತು, 2009ನೇ ಸಾಲಿನ ವಿಧೇಯಕಗಳನ್ನು ದಿ:27-02-2009 ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಸಹಮತಿ ನೀಡಿರುವ ಬಗ್ಗೆ.

ಉಪಾಧ್ಯಕ್ಷರು: ಈಗ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದ ಸಂದೇಶವಿದೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಮದಿರುವ ಸಂದೇಶದಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ: 27.2.2009ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 2009,
2. ಕರ್ನಾಟಕ ಮೌಲ್ಯವರ್ಧಿತ ತೆರಿಗೆ ತಿದ್ದುಪಡಿ ವಿಧೇಯಕ, 2009,
3. ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ವಿಧೇಯಕ, 2009
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ತಿದ್ದುಪಡಿ ವಿಧೇಯಕ, 2009,
5. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ತಿದ್ದುಪಡಿ ವಿಧೇಯಕ, 2009,
6. ಕರ್ನಾಟಕ ಸ್ಟ್ಯಾಂಪ್ ತಿದ್ದುಪಡಿ ವಿಧೇಯಕ, 2009 ಮತ್ತು
7. ಕರ್ನಾಟಕ ಧನವನಿಯೋಗ ಸಂಖ್ಯೆ:1 ವಿಧೇಯಕ 2009.

10. ಸಂಕ್ಷಿಪ್ತ ವರದಿ

ವಿಷಯ:- 13ನೇ ವಿಧಾನಸಭೆಯ ಎರಡನೇ ಅಧಿವೇಶನದ ಮುಂದುವರೆದ ಉಪವೇಶನಗಳ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.

******

ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ 19 ಫೆಬ್ರವರಿ, 2009 ರಿಂದ ದಿನಾಂಕ 27ನೇ ಫೆಬ್ರವರಿ,

2009ರವರೆಗೆ ಸಮಾವೇಶಗೊಂಡು ಒಟ್ಟು 6 ದಿನಗಳಲ್ಲಿ 49 ಗಂಟೆಗಳ ಕಾಲ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಸದರಿ ಅಧಿವೇಶನದಲ್ಲಿ ಇತ್ತೀಚೆಗೆ ನಿಧನಹೊಂದಿದ ಸ್ವಾತಂತ್ರ್ಯ ಹೋರಾಟಗಾರರು, ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ರಾಮಸ್ವಾಮಿ ವೆಂಕಟರಾಮನ್, ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಬಿ.ಎನ್.ಕೆಂಗೇಗೌಡ, ಶ್ರೀ ಎಂ.ಜಿ.ಸತ್ಯನಾರಾಯಣ ಹಾಗೂ ಶ್ರಿ ವಿ.ಎಸ್.ಕರ್ಜಗಿ ಅವರುಗಳು ನಿಧನ ಹೊಂದಿರುವುದರ ಬಗ್ಗೆ ಸದನದಲ್ಲಿ ಸಂತಾಪ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

ದಿನಾಂಕ 20.02.2009 ರಂದು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು 2009–10ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸಿದ್ದು, ಈ ಬಗ್ಗೆ ಒಟ್ಟು ನಾಲ್ಕು ದಿನಗಳ ಚರ್ಚೆ ನಡೆಸಿ ದಿನಾಂಕ 27.02.2009ರಂದು ಮಾನ್ಯ ಮುಖ್ಯಮಂತ್ರಿಯವರ ಉತ್ತರದೊಂದಿಗೆ ಆಯವ್ಯಯದ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಿ ಸದನವು ಅನುಮೋದನೆ ನೀಡಿರುತ್ತದೆ. ಅಲ್ಲದೆ ದಿನಾಂಕ 27.02.2009ರಮದು 2008–09ನೇ ಸಾಲಿನ ಪೂರಕ ಅಂದಾಜು (ಎರಡನೇ ಕಂತು)ಗಳನ್ನು ಸದನದಲ್ಲಿ ಮಂಡಿಸಲ್ಪಟ್ಟು ದಿನಾಂಕ 27.02.2009ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ದಿನಾಂಕ:31.3.2008ರ ಅಂತ್ಯದವರೆಗಿನ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳು, ಸಿವಿಲ್, ವಾಣಿಜ್ಯ ಹಾಗೂ ರಾಜಸ್ವ ಸ್ವೀಕೃತಿ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

ದಿನಾಂಕ:27.2.2009ರಂದು ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಮೂವರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಧ್ಯಕ್ಷರಿಗೆ ಸದನವು ಅಧಿಕಾರ ನೀಡಿದೆ.

ದಿನಾಂಕ: 24.2.2009 ಮಾನ್ಯ ವಿರೋಧಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಶ್ರೀ ವೈ. ಸಂಪಂಗಿ, ಕೆ.ಜಿ.ಎಫ್ ವಿಧಾನಸಭಾ ಕ್ಷೇತ್ರ ಇವರ ವಿರುದ್ಧ ದಾಖಲಾದ ಲಂಚಪ್ರಕರಣ ಕುರಿತು ಪ್ರಸ್ತಾಪಿಸಿರುತ್ತಾರೆ. ಈ ವಿಷಯದ ಬಗ್ಗೆ ಮಾನ್ಯ ಸಭಾಧ್ಯಕ್ಷರು, ತಮ್ಮ ನಿರ್ಣಯವನ್ನು ಹೇಳಲಾಗುವುದೆಂದು ತಿಳಿಸಿದ ಮೇರೆಗೆ ದಿನಾಂಕ:27.7.2009 ರಂದು ಮಾನ್ಯ ಸಭಾಧ್ಯಕ್ಷರು ತಮ್ಮ ತೀರ್ಪನ್ನು ನೀಡಿ, ಸದರಿ ಪ್ರಕರಣದ ಬಗೆ ವಿಚಾರಣೆಯನ್ನು ನಡೆಸಿ ಮೂವತ್ತು ದಿವಸಗಳೊಳಗೆ ವರದಿಯನ್ನು ಸಲ್ಲಿಸಲು ಮಾನ್ಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಶೇಷ ಸದನ ಸಮಿತಿಯನ್ನು ರಚಿಸಿದ್ದಾರೆ.

ಈ ಅಧಿವೇಶನದಲ್ಲಿ ನಿಯಮ 60ರ ಮೇರೆಗೆ, ಮೂರು ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ ಎರಡು ಸೂಚನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಿದ

ನಂತರ ಅವುಗಳನ್ನು ನಿಯಮ 69ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆಗೆ ಅವಕಾಶ ಮಾಡಿ ಚರ್ಚಿಸಲಾಗಿರುತ್ತದೆ ಹಾಗೂ ನಿಯಮ 69ರಡಿ ಮೂರು ಅಲ್ಪಕಲಾವಧಿ ಸೂಚನೆಗಳನ್ನು ಅಂಗೀಕರಿಸಲಾಗಿದೆ.

ಈ ಅವಧಿಯಲ್ಲಿ ಒಟ್ಟು 523 ಪ್ರಶ್ನೆಗಳನ್ನು ಸ್ವೀಕರಿಸಿ 415 ಪ್ರಶ್ನೆಗಳನ್ನು ಅಂಗೀಕರಿಸಿದ್ದು, 381 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಒಂದು ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ಅಂಗೀಕರಿಸಿದ್ದು, ಚರ್ಚೆಯಾಗಿರುವುದಿಲ್ಲ. 137 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 128 ಅಂಗೀಕರಿಸಿ 44 ಸೂಚನೆಗಳಿಗೆ ಸರ್ಕಾರದಿಂದ ಉತ್ತರ ಪಡೆದಿದ್ದು, ಆ ಪೈಕಿ 15 ಸೂಚನೆಗಳು ಸದನದಲ್ಲಿ ಚರ್ಚೆಯಾಗಿರುತ್ತವೆ ಹಾಗೂ 7 ಸೂಚನೆಗಳು ತಿರಸ್ಕೃತವಾಗಿರುತ್ತವೆ.

ಸದರಿ ಅವಧಿಯಲ್ಲಿ 49 ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ. ನಿಯಮ 351ರಡಿಯಲ್ಲಿ 53 ಸೂಚನೆಗಳನ್ನು ಸ್ವೀಕರಿಸಿ, ಆ ಪೈಕಿ 47 ಸೂಚನೆಗಳನ್ನು ಅಂಗೀಕರಿಸಲಾಗಿದೆ.

ಕರ್ನಾಟಕ ವಿಧಾನಮಂಡಲದ 2008–09ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಒಂದು ಮತ್ತು ಎರಡನೇ ವರದಿ, ಖಾಸಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಹತ್ತೊಂಭತ್ತನೇ ವರದಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

ಧನವಿನಿಯೋಗ ವಿಧೇಯಕವೂ ಸೇರಿದಂತೆ ಒಟ್ಟು ಏಳು ವಿಧೇಯಕಗಳನ್ನು ಮಂಡಿಸಿ ಅಂಗಿಕರಿಸಲಾಗಿರುತ್ತದೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸಹಕರಿಸಿದ ಸಭಾನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಮಾನ್ಯ ಉಪ ಸಭಾಧ್ಯಕ್ಷರಿಗೆ, ಜನತಾದಳ(ಎಸ್) ಶಾಸಕಾಂಗ ಪಕ್ಷದ ನಾಯಕರಿಗೆ, ಎಲ್ಲಾ ಮಾನ್ಯ ಸದಸ್ಯರಿಗೆ, ಸದನದ ಕಾರ್ಯಕಲಾಪಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಲು ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೆ, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ, ನೌಕರ ವರ್ಗದವರಿಗೆ, ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 2009–10ನೇ ಸಾಲಿನ ಆಯವ್ಯಯದ ಮಂಡನೆ ಮಾಡಿದಾಗಿನಿಂದ ಇವತ್ತಿನವರೆಗೆ ಅನೇಕ ಉಪಯುಕ್ತ ಸಲಹೆಗಳನ್ನು ಪ್ರತಿಪಕ್ಷದ ನಾಯಕರು ಹಾಗೂ ಸದಸ್ಯರುಗಳು ಸಲಹೆಗಳನ್ನು ಕೊಟ್ಟು, ಈ ಆಯವ್ಯಯವನ್ನು ಸುಸೂತ್ರವಾಗಿ ಇಲ್ಲಿ

ಮಂಡನೆ ಮಾಡುವುದಕ್ಕೆ ಮತ್ತು ಅನುಮೋದನೆ ಮಾಡುವುದಕ್ಕೆ ಸಹಕರಿಸಿದಂತಹ ಈ ಮನೆಯ ಎಲ್ಲಾ ಸದಸ್ಯರಿಗೆ ಮಾಧ್ಯಮದ ಸ್ನೇಹಿತರಿಗೆ, ಸನ್ಮಾನ್ಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ, ಎಲ್ಲಾ ಅಧಿಕಾರಿ ಮಿತ್ರರಿಗೆ, ಸರ್ಕಾರದ ಪರವಾಗಿ ಅಭಿನಂದನೆ ಸಲ್ಲಿಸಿ ಇದೇ ರೀತಿ ಮುಂದೆ ಬರುವಂತಹ ದಿನಗಳಲ್ಲಿ ಸಹ ಸೌಹಾರ್ದಯುತವಾಗಿ ರಾಜ್ಯದ ಅಭಿವೃದ್ಧಿ ಸಲುವಾಗಿ ಒಟ್ಟಾಗಿ ಕೆಲಸ ಮಾಡೋಣ. ಅದಕ್ಕೆ ನಿಮ್ಮೆಲ್ಲರ ಸಹಕಾರವನ್ನು ಬಯಸಿ, ಮತ್ತೊಮ್ಮೆ ತಮಗೆಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಬಹುಶ: ಈ ಬಜೆಟ್ ಅಧಿವೇಶನ ಅತ್ಯಂತ ಕಡಿಮೆ ಅವಧಿಯಲ್ಲಿ ನಡೆದರು ಕೂಡ ಈ ಸಾರಿ ಬಜೆಟ್ ಮೇಲೆ ಸಾಕಷ್ಟು ಚರ್ಚೆ ಆಗತಕ್ಕಂಥದ್ದು ಮತ್ತು ಗಮನಸೆಳೆಯುವ ಸೂಚನೆಗಳು, ಪ್ರಶ್ನಾವಳಿಗಳು ಅದಕ್ಕೆ ಉತ್ತರ, ನಿಯಮ 69ರ ಮೇಲೆ ಚರ್ಚೆ ಮಾಡತಕ್ಕಂಥದ್ದು, ಅನೇಕ ವಿಷಯಗಳು ಚರ್ಚೆ ಆಗಿವೆ. ಆದರೆ ಇನ್ನೂ ಹೆಚ್ಚಿನ ಕಾಲಾವಕಾಶ ಸಿಕ್ಕಿದ್ದರೆ ಖಂಡಿತವಾಗಿ ಹೊಸ ಸದಸ್ಯರಿಗೆ ಮತ್ತು ಹೊಸದಾಗಿ ಮೊದಲನೇ ಸಲ ಆರಿಸಿ ಬಂದಂತಹ ಸದಸ್ಯರಿಗೆ ಮಾತನಾಡತಕ್ಕಂತಹ ಅವಕಾಶ ಸಿಗುತ್ತಿತ್ತು. ಆದರೆ ಕಾರಣಾಂತರಗಳಿಂದ ಬಹಳ short notice ನಲ್ಲಿ ಮತ್ತು ಅಲ್ಪ ಕಾಲದಲ್ಲಿ ಈ ಅಧಿವೇಶನ ಮುಗಿಯುತ್ತಿರುವ ಕಾರಣದಿಂದ ಬಹಳಷ್ಟು ಜನರಿಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಆಗಲಿಲ್ಲ. ಆದರೂ ಕೂಡ ಅದಷ್ಟೇ ದಿನದಲ್ಲಿ ಉಪಯುಕ್ತವಾದ ಚರ್ಚೆ ಮತ್ತು ಅದಕ್ಕೆ ತಮ್ಮ ಸಹಕಾರ, ಮಾನ್ಯ ಸಭಾಧ್ಯಕ್ಷರು ಹಾಗೂ ಮಾನ್ಯ ಉಪಾಧ್ಯಕ್ಷರು, ಮಾಧ್ಯಮದ ಮಿತ್ರರು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಅನೇಕ ಈ ಸದನದ ಸದಸ್ಯರು ವಿಶೇಷವಾಗಿ ಈ ಕಡೆ ಇರತಕ್ಕಂತಹ ನಮ್ಮ ಉಪನಾಯಕರಾದ ಮಾನ್ಯ ಜಯಚಂದ್ರರವರು ನಾವು ಇಲ್ಲದೇ ಇದ್ದರೂ ಕೂಡ ಸಹಕರಿಸಿ ಕಲಾಪವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕೆ ತಾವು ಕೂಡ ಸ್ಪಂದಿಸಿ ಒಳ್ಳೆಯ ರೀತಿಯಿಂದ ಯಾವುದೇ ಧರಣಿ ವಾಕ್ ಔಟ್ ಇಲ್ಲದೆ ಈ ಅಧಿವೇಶನ ನಡೆದಿದೆ. ಸದನ ಇದೇ ರೀತಿಯಾಗಿ smooth ಆಗಿ ನಡೆಯಬೇಕೆಂಬುದೇ ನಮ್ಮೆಲ್ಲರ ಇಚ್ಛೆ. ಅದೇ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಮುಂದೆ ನಡೆದುಕೊಂಡು ಹೋಗುತ್ತಾರೆ ಎನ್ನತಕ್ಕಂಥದ್ದು ನಮ್ಮ ಅಪೇಕ್ಷೆ. ಅದಕ್ಕಾಗಿ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಮುಂದೆ ಸದನ ಸುಲಲಿತವಾಗಿ ನಡೆಯಲಿ ಎನ್ನತಕ್ಕಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವನ್ನು ದಿನಾಂಕ 27ನೇ ಫೆಬ್ರವರಿ 2009 ರಂದು ರಾತ್ರಿ 9 ಗಂಟೆ 40 ನಿಮಿಷಕ್ಕೆ ಅನಿರ್ದಿಷ್ಟ ಕಾಲಾವಧಿವರೆಗೆ ಮುಂದೂಡಲಾಯಿತು)